**ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ರವರ ನ್ಯಾಯಾಲಯ, ಅರಸೀಕೆರೆ,**

**ಸಿ.ಸಿ. ನಂ.531/2017**

ಫಿರ್ಯಾದುದಾರರು : ಶ್ರೀಮತಿ ರೇಖಾ ಕೋಂ ಶಿವಕುಮಾರ್, 34 ವರ್ಷ,
5 ನೇ ಕ್ರಾಸ್, ಸುಭಾಷ್ ನಗರ, ಅರಸೀಕೆರೆ ಟೌನ್.

ಃ ವಿರುದ್ಧ ಃ

ಆರೋಪಿತ : ರವಿಕಿರಣ್ ಬಿನ್ ಭಾರತಿ ನಿಂಗರಾಜು, 27 ವರ್ಷ,
4 ನೇ ಕ್ರಾಸ್, ಬಸವೇಶ್ವರ ನಗರ, ಅರಸೀಕೆರೆ ಟೌನ್.

**ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ವಿಚಾರಣೆ**

ಪ್ರಶ್ನೆ-1. : ನ್ಯಾಯಾಲಯದಲ್ಲಿ ಈ ಕೇಸಿನ ಸಾಕ್ಷಿದಾರರು ನುಡಿದಿರುವ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿದ್ದೀರಾ?

ಉತ್ತರ : ಹೌದು

ಪ್ರಶ್ನೆ-2 : ಫ್ರಾಸಾ-1 ರೇಖಾ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯಾದ ನೀವು ದಿಃ26-06-2017 ರಂದು ರೂ. 2,80,000 ಗಳನ್ನು ಸಾಲವಾಗಿ ಪಡೆದುಕೊಂಡಿರುತ್ತೀರಾ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ-3. : ಸದರಿ ಸಾಕ್ಷಿದಾರರು ತಮ್ಮ ವಿಚಾರಣೆಯಲ್ಲಿ ಮುಂದುವರೆದು ಸದರಿ ಹಣವನ್ನು 1 ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿರುತ್ತೀರಿ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ-4 : ಸದರಿ ಫ್ರಾಸಾ-1 ರವರು ತಮ್ಮ ವಿಚಾರಣೆಯಲ್ಲಿ ಮುಂದುವರೆದ ಆರೋಪಿಯು ತಿಳಿಸಿದಂತೆ ಅವಧಿ ಮುಗಿದ ನಂತರ ತನ್ನ ಸಾಲದ ಹಣವನ್ನು ಮರುಪಾವತಿ ಮಾಡುವಂತೆ ಒತ್ತಾಯಿಸಿದಾಗ ಆರೋಪಿಯಾದ ನೀವು ಸದರಿ ಸಾಲ ತೀರುವಳಿಗಾಗಿ ತನ್ನ ಹೆಸರಿಗೆ ಫೆಡರಲ್ ಬ್ಯಾಂಕ್, ಅರಸೀಕೆರೆ ಶಾಖೆಯ ರೂ.2,80,000 ಸಾಲದ ಹಣಕ್ಕೆ ದಿಃ28-07-2017 ರ ಚೆಕ್ ನಂಃ 006553 ನ್ನು ನೀಡಿರುತ್ತೀರಿ. ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ-5 : ಸದರಿ ಪ್ರಾಸಾ-1 ರವರು ತನ್ನ ಮುಂದುವರೆದ ವಿಚಾರಣೆಯಲ್ಲಿ ಆರೋಪಿಯು ನೀಡಿದ ಸದರಿ ಚೆಕ್ ನ್ನು ತನ್ನ ಬ್ಯಾಂಕಾದ ಸಿಂಡಿಕೇಟ್ ಬ್ಯಾಂಕ್, ಅರಸೀಕೆರೆ ಶಾಖೆಯ ಮೂಲಕ ಹಾಜರುಪಡಿಸಿದಾಗ ಅಕೌಂಟ್ ಕ್ಲೋಸಡ್ ಎಂದು ಚೆಕ್ ಅಮಾನ್ಯಗೊಂಡು ವಾಪಸ್ಸು ಬಂದಿರುತ್ತದೆ. ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ-6 : ಸದರಿ ಪ್ರಾಸಾ-1 ರವರು ತನ್ನ ಮುಂದುವರೆದ ವಿಚಾರಣೆಯಲ್ಲಿ ತನ್ನ ವಕೀಲರ ಮೂಲಕ ಆರೋಪಿಯಾದ ನಿಮಗೆ ದಿಃ 02-08-2017 ರಂದು ನೋಟೀಸು ನೀಡಿದ್ದು, ಸದರಿ ನೋಟೀಸು ನಿಮಗೆ ಜಾರಿಯಾಗಿದ್ದರೂ ಸಹ ಈವರೆಗೂ ಯಾವುದೇ ಹಣವನ್ನು ವಾಪಸ್ಸು ಮಾಡದೇ ಮತ್ತು ಜವಾಬು ನೀಡಿದೇ ತಟಸ್ಥರಾಗಿರುತ್ತೀರಿ. ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ-7 : ಸದರಿ ಪ್ರಾಸಾ-1 ರವರು ತನ್ನ ಮುಂದುವರೆದ ವಿಚಾರಣೆಯಲ್ಲಿ ಆರೋಪಿಯು ತಾನು ನೀಡಿದ ಹಣಕ್ಕೆ ಮೋಸ ಮಾಡಬೇಕೆಂಬ ದುರುದ್ದೇಶದಿಂದ ಚೆಕ್ ನೀಡಿದ್ದು ತನ್ನ ಖಾತೆಯಲ್ಲಿ ಚೆಕ್ ನಗದಾಗುವಷ್ಟು ಹಣವನ್ನು ತನ್ನ ಖಾತೆಯಲ್ಲಿ ಇಡದೇ ಚೆಕ್ ನಗದಾಗದೇ ವಾಪಸ್ಸು ಆಗಿರುತ್ತದೆ ಎಂದು ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ : ಸುಳ್ಳು

ಪ್ರಶ್ನೆ 8 : ಈ ಪ್ರಕರಣದ ಬಗ್ಗೆ ನೀವೇನಾದರೂ ಹೇಳುವುದಿದೆಯಾ?

ಉತ್ತರ : ಇಲ್ಲ

ಪ್ರಶ್ನೆ 9 : ನಿಮ್ಮ ಪರವಾಗಿ ಸಾಕ್ಷ್ಯ ಇದೆಯಾ ?

ಉತ್ತರ : ಇಲ್ಲ

(ಆರೋಪಿತನಿಗೆ ಮೇಲ್ಕಂಡ ಸಾಕ್ಷ್ಯವನ್ನು ಓದಿ, ಹೇಳಿದ ನಂತರ ಅವರು ನೀಡಿದ ಉತ್ತರವನ್ನು ನನ್ನ ಸ್ವಹಸ್ತಾಕ್ಷರದಲ್ಲಿ ತೆರೆದ ನ್ಯಾಯಾಲಯದಲ್ಲಿ ನಮೂದಿಸಿರುವುದಾಗಿ ದೃಢೀಕರಿಸಿದೆ)

( ನಿರ್ಮಲ ಕೆ. )
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ.